ಅ) ಈ ಜಿಲ್ಲೆಯಲ್ಲಿ ಹೊಸದಾಗಿ ಪ್ರವಾಸಿ ಕೇಂದ್ರಗಳಿಗಾಗಿ ಯಾವ ಯಾವ ಸ್ಥಳಗಳನ್ನು ಗುರುತಿಸಲಾಗಿದೆ?

ಇ) ಜಿಲ್ಲೆಯಲ್ಲಿರುವ ಪ್ರವಾಸಿ ಕೇಂದ್ರಗಳ ಅಭಿವೃದ್ಧಿಗಾಗಿ 1990-91 ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಮೊಬಲಗೆಷ್ಟು?

ಈ) 1991ನ್ನು 'ಭಾರತ ಸಂದರ್ಶಿಸಿ' ವರ್ಷವನ್ನಾಗಿ ಆಚರಿಸುತ್ತಿರುವುದರಿಂದ ಜಿಲ್ಲೆಯಲ್ಲಿನ ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರದ ಮುಂದಿರುವ ಯೋಜನೆಗಳು ಯಾವುವು?

ಉ) ಇದಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು)

ಅ) 1) ಧಾರವಾಡ 2) ಗದಗ್ 3) ಹುಬ್ಬಳ್ಳಿ 4) ಶಿಗ್ಗಾವ್ 5) ಲಕ್ಕುಂಡಿ 6) ನರಗುಂದ 7) ಹಾನಗಲ್ 8) ಕಾಗಿನೆಲೆ.

ಆ) ಸಿಂಗಟಾಲೂರು.

ಇ) ಇಲ್ಲ

ಈ ಮತ್ತು ಉ) ಗದಗ್ ಹಾಗೂ ಸಿಂಗಾಟಾಲೂರುಗಳಲ್ಲಿ ಪ್ರವಾಸಿ ಸೌಲಭ್ಯ ಒದಗಿಸಲು ಪರಿಶೀಲಿಸಲಾಗುತ್ತಿದೆ.

ರಾಜ್ಯದಲ್ಲಿ ಅಭಿವೃದ್ಧಿ ಹೊಂದಿದ ಪ್ರವಾಸಿ ಕೇಂದ್ರಗಳ ಸಂಖ್ಯೆ

1631 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1989-90 ಹಾಗೂ 1990-91 ರಲ್ಲಿ ರಾಜ್ಯದಲ್ಲಿನ ಎಷ್ಟು ಸ್ಥಳಗಳನ್ನು ಪ್ರವಾಸಿ ಅಭಿವೃದ್ಧಿ ಕೇಂದ್ರಗಳನ್ನಾಗಿ ಮಾರ್ಪಡಿಸಿದೆ? ಅವು ಯಾವುವು?

ಆ) ಶಿಗ್ಗಾಂವ್ ತಾಲ್ಲೂಕು ಮೇರೆ ನಾಲೆ ಕನಕದಾಸರರು ಹುಟ್ಟಿದ ಸ್ಥಳವಾದ ಬಾಡವನ್ನು ಪ್ರವಾಸಿ ಅಭಿವೃದ್ಧಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವುದು ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಇ) ಯಾವ ಆಧಾರದ ಮೇಲೆ ಪ್ರವಾಸಿ ಅಭಿವೃದ್ಧಿ ಕೇಂದ್ರವನ್ನಾಗಿ ಪರಿಗಣಿಸಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು)

ಅ) 1989-90ರಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಪ್ರವಾಸಿ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

1) ಬೇಲೂರು 2) ಶ್ರೀರಂಗಪಟ್ಟಣ 3) ಬನವಾಸಿ 4) ಆಗುಂಬೆ 5) ಶೃಂಗೇರಿ

1990-91 ರಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಪ್ರವಾಸಿ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

1) ಅನ್ಮೋಡ್ 2) ಹುನಗುಂದ್ 3) ಲೋಕಾಪುರ 4) ಬಾಬಾಬುಡನ್ ಗಿರಿ 5) ಭೀಮೇಶ್ವರಿ ಫಿಷಿಂಗ್ ಕ್ಯಾಂಪ್ 6) ಹಂಪಿ (ಪ್ರವಾಸಿ ಸಂಕೀರ್ಣ 2ನೇ ಘಟ್ಟ)

ಆ) ಇದು ಸರ್ಕಾರ ಗುರುತಿಸಿರುವ ಪ್ರೇಕ್ಷಣೆಯ ಸ್ಥಳಗಳ ಪಟ್ಟಿಯಲ್ಲಿ ಗುರುತಿಸಿಲ್ಲ.

ಇ) ನಿರ್ದಿಷ್ಟ ನಿಯಮಗಳಿಲ್ಲ. ಆದರೆ ಕೆಳಕಂಡ ಅಂಶಗಳನ್ನು ಪರಿಗಣಿಸಲಾಗುವುದು.

1) ಸ್ಥಳದಲ್ಲಿರುವ ಪ್ರೇಕ್ಷಣೆಯ ಆಕರ್ಷಣೆ
2) ಈಗಾಗಲೇ ಗುರುತಿಸಿರುವ ರಾಷ್ಟ್ರೀಯ ಪ್ರೇಕ್ಷಣೀಯ ಸ್ಥಳಗಳಿಂದ ಈ ಸ್ಥಳಕ್ಕಿರುವ ದೂರ.
3) ಲಭ್ಯವಾಗಿರುವ ಮೂಲಭೂತ ಸೌಲಭ್ಯಗಳು.

SHIFTING OF THE OFFICE OF THE KARNATAKA STATE ARCHIVES FROM VIDHANA SOUDHA

1002-SHRI K. LAKKAPPA (KUNIGAL) : will the Hon'ble CHIEF MINISTER be pleased to state?

a) *Whether it has come to the notice of the Government that the employees working in Karnataka State Archives Department are sufering from dust diseases like Asthma etc., since they are sitting in between racks of old records;*

b) *If so, will the Government take steps to shift the above Department from Vidhana Soudha to Multistoreyed Building;*

c) *Is there ant move to introduce dust free system to maintain the old Records?*

SRI S. BANGARAPPA (Hon'ble CHIEF MINISTER)

a) No

b) Does not arise

c) Department has provided Vaccum Cleaners and Exhaust Fans to dust the Records periodically.

ವಿದ್ಯುಚ್ಛಕ್ತಿ ಮಂಡಲಿಯವರು 90-91ನೇ ಸಾಲಿಗೆ ಎಲ್.ಟಿ. ಇನ್ಸುಲೇಟರ್‌ಗಳನ್ನು ಖರೀದಿಸಿರುವುದು.

1632 - ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಶಾಖ ನಿಯಂತ್ರಣ ಕಿಲ್‌ನ ನಿಬಂಧನೆ ಇಲ್ಲದೇ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು 1990-91ನೇ ಸಾಲಿಗೆ ಎಲ್.ಟಿ. ಇನ್ಸುಲೇಟರ್‌ಗಳನ್ನು ಖರೀದಿಸಿರುವುದು ನಿಜವೇ?*

ಆ) *ಸ್ಥಳೀಯ ವಾಣಿಜ್ಯೋದ್ಯಮಿಗಳು 1990-91ರ ಸಾಲಿನಲ್ಲಿ ಮಾಡಿರುವ ಸರಬರಾಜು ತೃಪ್ತಿಕರವಾಗಿಲ್ಲವೆಂಬುದು ನಿಜವೇ ಮತ್ತು ಇದರಿಂದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಬಹಳ ತೊಂದರೆಗೆ ಒಳಪಟ್ಟಿಲ್ಲವೇ?*

ಇ) *ಈ ಮುಂಚಿನಂತೆಯೇ ಶಾಖ ನಿಯಂತ್ರಣ ಕಿಲ್ನ್‌ನಿಂದ ಕೂಡಿರುವ ಎಲ್.ಟಿ. ಇನ್ಸುಲೇಟರ್‌ಗಳನ್ನು ಖರೀದಿಸಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಪ್ರಾರಂಭಿಸುವುದೇ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು)

ಅ) ಹೌದು